1	2	3
35	ಮೆ: ಗೀತಾಂಜಲಿ ಸಾಮಿಲ್, ನಂ. 24:1, ಹೆಸರು ಘಟ್ಟ ರಸ್ತೆ, ಚಿಕ್ಕಸಂದ್ರ, ಬೆಂಗಳೂರು	04.12.2001
36	ಮೆ: ಉಮಾ ಎಜೆನ್ಸಿಸ್, ನೆಲಗದರನಹಳ್ಳಿ ರಸ್ತೆ ನಾಗಸಂದ್ರ ಪೊಸ್ಟ್, ಬೆಂಗಳೂರು–73	04.12.2001
37	ಮೆ: ಕಾವೇರಿ ಟಿಂಬರ್ಸ್, ನಂ. 2:3, ನ್ಯೂ ಬಿಇಎಲ್ ರಸ್ತೆ, ದೇವಸಂದ್ರ, ಬೆಂಗಳೂರು–94	04.12.2001
38	ಮೆ: ಅಂಬಿಕಾ ವಿಜಯ ಸಾಮಿಲ್, ನಂ. 24:1, ಚಿಕ್ಕಸಂದ್ರ, ಹೆಸರುಘಟ್ಟ ರಸ್ತೆ, ರೈಲ್ವೆಗೇಟ್ ಹತ್ತಿರ, ಬೆಂಗಳೂರು	04.12.2001
39	ಮೆ: ಸುರಣಿ ಟಿಂಬರ್, ನಂ. 18:1ಸಿ:ಸಿ3, ದೊಡ್ಡಕೆನ್ನಳ್ಳಿ, ಸರ್ಜಾಪುರ ರಸ್ತೆ, ರೈಲ್ವೆಗೇಟ್ ಹೆತ್ತಿರ, ಬೆಂಗಳೂರು–35	04.12.2001
40	ಮೆ: ಗೀತಾ ಟಿಂಬರ್, ನಂ. 11, ನ್ಯೂ ಟಿಂಬರ್ ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು.	
41	ಮೆ: ಮಾರುತಿ ಟಿಂಬರ್ ಅಂಡ್ ಪ್ಲೈವುಡ್, ಸುಲ್ತಾನ್ ಪಾಳ್ಯ ಮುಖ್ಯ ರಸ್ತೆ, ಮನೋರಾಯಣ ಪಾಳ್ಯ, ಆರ್.ಟಿ.ನಗರ, ಬೆಂಗಳೂರು–32	04.12.2001
42	ಮೆ: ಮಾರುತಿ ವುಡ್ ಇಂಡಸ್ಟ್ರೀಸ್, ನಂ. 125, ಚಂದಾಪುರ ಮುಖ್ಯ ರಸ್ತೆ, ಆನೇಕಲ್, ಬೆಂಗಳೂರು ಗ್ರಾಮಾಂತರ ಜಿಲ್ಲೆ	
43	ಮೆ: ಉಮಿಯ ವಿಜಯ ಸಾಮಿಲ್, ನಂ. 324:1, ಮೈಸೂರು ರಸ್ತೆ, ಕ್ವಾಲೀಟಿ ಬಿಸ್ಕಟ್ ಎದುರು, ಬೆಂಗಳೂರು–39	04.12.2001

ಕುಂದಗೋಳ – ಶರೇವಾಡ ಸವಣನೂರು ರಸ್ತೆಗಳ ದುರಸ್ತಿ

4364(5266) ಶ್ರೀ ಶಿವಳ್ಳಿ ಚನ್ನಬಸಪ್ಪ ಸತ್ಯಪ್ಪ (ಕುಂದಗೋಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಂದಗೋಳ–ಶೇರವಾಡ ಸವಣೂರು ರಸ್ತೆಯನ್ನು ಹೆದ್ದಾರಿ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ ;

ಆ) ಜನರ ಮತ್ತು ವಾಹನಗಳ ಓಡಾಟದಿಂದಾಗಿ ರಸ್ತೆಗಳು ಸಾಕಷ್ಟು ದುಸ್ಥಿತಿಯಲ್ಲಿರುವುದರಿಂದ, ಈಗಲಾದರೂ ರಾಜ್ಯ ಹೆದ್ದಾರಿಯನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದೆ : ಹಾಗಿದ್ದಲ್ಲಿ, ಹೆದ್ದಾರಿಯ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ;

ಇ) ಕುಂದಗೋಳ ತಾಲ್ಲೂಕಿನ ಕಳಸ, ಕಮಡೊಳ್ಳಿ ಗ್ರಾಮಗಳು 15 ಸಾವಿರ ಜನಸಂಖ್ಯೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ 30 ಸಾವಿರ ಜನಸಂಖ್ಯೆಯು ಈ ರಸ್ತೆಯಲ್ಲಿ ಓಡಾಡುತ್ತಿರುವುದರಿಂದ ವಾಹನಗಳ ಸಂಚಾರ ದಟ್ಟಣೆಯಿಂದಾಗಿ ಸಾಕಷ್ಟು ಕೆಟ್ಟು ಹೋಗಿರುವುದರಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಈ) ಸದರೀ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರ ಉದ್ದೇಶಿಸಿದೆಯೆ :

ಉ) ಹಾಗಿದ್ದಲ್ಲಿ, ಉದ್ದೇಶಿತ ರಸ್ತೆಗೆ ಅನುದಾನ ಎಷ್ಟು ; ಸದರಿ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು ; ಯಾವಾಗ ಪೂರ್ಣಗೊಳಿಸಲಾಗುವುದು ;

ಊ) ಹುಬ್ಬಳ್ಳಿ–ಲಕ್ಷ್ಮೇಶ್ವರ ಮಧ್ಯೆ ಸಾಕಷ್ಟು ವಾಹನಗಳ ದಟ್ಟಣೆ ಮತ್ತು ಜನದಟ್ಟಣೆಯಿಂದಾಗಿ ರಸ್ತೆಯು ಹದಗೆಟ್ಟು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ; ಹಾಗಿದ್ದಲ್ಲಿ ಅದನ್ನು ಕೂಡಲೇ ದುರಸ್ತಿಗೊಳಿಸಿ ರಾಜ್ಯ ಹೆದ್ದಾರಿಯನ್ನಾಗಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ ಆದರೆ ಈ ರಸ್ತೆಯನ್ನು ವಾರ್ಷಿಕ ನಿರ್ವಹಣೆ ಹಾಗೂ ದುರಸ್ತಿ ಅನುದಾನದಲ್ಲಿ ತಗ್ಗು ಗುಂಡಿಗಳನ್ನು ತುಂಬಿ ದುರಸ್ತಿ ಕೆಲಸವನ್ನು ಮಾಡಲಾಗುತ್ತಿದೆ.

ಇ) ಬಂದಿರುತ್ತದೆ. ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ನಿರ್ವಹಣೆ ಮತ್ತು ದುರಸ್ತಿ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ.

ಈ) -- " --

ಉ) -- " --

ಊ) ಬಂದಿರುತ್ತದೆ. ರಾಜ್ಯ ಹೆದ್ದಾರಿಯನ್ನಾಗಿ ಮಾಡಲು ಯೋಜನೆಯನ್ನು ರೂಪಿಸಲಾಗುತ್ತಿದೆ. ಯೋಜನೆ ರೂಪಿಸಿದ ನಂತರ ಅದರಂತೆ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ನಷ್ಟ ಹೊಂದಿರುವ ಕಾರ್ಖಾನೆಗಳು ಹಾಗೂ ಕಾರ್ಮಿಕರು

4365(4994) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಬಂಡವಾಳ ಹಿಂತೆಗೆಯುವಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದ ಪ್ರಮುಖ ನಷ್ಟ ಹೊಂದಿದಂತಹ ಕಾರ್ಖಾನೆಗಳು ಖಾಸಗೀಕರಣಗೊಳಿಸಿದ ಹಿನ್ನೆಲೆಯಲ್ಲಿ ನಿರುದ್ಯೋಗಿಯಾದಂತಹ ಕಾರ್ಮಿಕರ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು) :

ಆ) ಇವರ ಪುನರ್‌ವಸತಿಯ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಡಿ.ಬಿ. ಚಂದ್ರಶೇಖರ್ (ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ಬಂಡವಾಳ ಹಿಂತೆಗೆಯುವಿಕೆ ಸಚಿವರು) :

ಅ) ಸಾರ್ವಜನಿಕ ಉದ್ದಿಮೆಗಳ ಸುಧಾರಣ ನೀತಿಯ ಅನುಸಾರ ಇದುವರೆವಿಗೆ ಯಾವುದೇ ಕಾರ್ಖಾನೆಗಳನ್ನು ಖಾಸಗೀಕರಣಗೊಳಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಖಾತೆ ಬದಲಾವಣೆ ವಿಳಂಬ

4366(4995) ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ತುಮಕೂರು ತಾಲ್ಲೂಕು ಉರ್ಡಿಗೆರೆ : ಹೋಬಳಿ, ಕ್ಯಾತ್ಸಂದ್ರ ಸ.ನಂ. 2:2ಬಿ1, 10:1 ಮತ್ತು ಮೈದಾಳ ಅಮಾನಿಕೆರೆ ಸ.ನಂ. 242:2, 242:3ಬಿ ಜಮೀನುಗಳ ಖಾತೆ ಪಹಣಿಯನ್ನು